ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ.149/2019

ದಿಃ **24.05.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ರೇವಣ್ಣ ಎಮ್. |
| ತಂದೆ/ಗಂಡನ ಹೆಸರು | ಲೇಟ್ ಮಂಚನಾಯಕ |
| ವಯಸ್ಸು | 40 ವರ್ಷ |
| ಕೆಲಸ | ಕೂಲಿ |
| ವಾಸಸ್ಥಳ | ಬೆಂಕಿಪುರ ಗ್ರಾಮ |

**ಮುಖ್ಯ ವಿಚಾರಣೆ ಆರೋಪಿ ಪರ ಸಿ.ಸಿ.ಎನ್ ವಕೀಲರಿಂದಃ**

ಆರೋಪಿ ನನ್ನ ಹೆಂಡತಿ. ನಾನು ಸ್ವಯಂ ಕೃಷಿ ಎಂಬ ಸಂಸ್ಥೆಯಲ್ಲಿ ಏಜೆಂಟ್ ಆಗಿ ಕೆಲಸ ನಿರ್ವಹಿಸುತ್ತಿದ್ದೆ, ಆಗ ಪಿರ್ಯಾದುದಾರರು ಹಾಗೂ ಅವರ ಹೆಂಡತಿಯಾದ ಪ್ರೇಮ ರವರು 100 ರೂ. ರಂತೆ ದಿನಕ್ಕೆ ನನ್ನ ಬಳಿ ಪಿಗ್ಮಿ ಕಟ್ಟುತ್ತಿದ್ದರು. 12.02.2011 ರಿಂದ 11.02.2011 ರವರೆಗೆ ಒಂದು ವರ್ಷಗಳ ಕಾಲ ಕಟ್ಟಿರುತ್ತಾರೆ. ಆ ರೀತಿ ಪಾವತಿಸಿದ್ದಂತ ಹಣ 36,000/- ಆಗಿರುತ್ತದೆ. ಆದಕಾರಣ ಸಂಸ್ಥೆ ಬಡ್ಡಿಯನ್ನು 38,514/- ರೂ.ಗಳ ಚೆಕ್ ನ್ನು ನೀಡಿರುತ್ತಾರೆ. ಸದರಿ ಚೆಕ್ ಅಮಾನತ್ತು ಆಗಿರುತ್ತದೆ. ಸಂಸ್ಥೆ ಮುಚ್ಚಿದ ಕಾರಣ ಚೆಕ್ ಅಮಾನತ್ತು ಆಗಿರುತ್ತದೆ. ಪಿರ್ಯಾದುದಾರರು ನನ್ನ ಬಳಿ ಹಣವನ್ನು ಕೇಳಲು ಬಂದಿರುತ್ತಾರೆ. ಸದರಿ ಬಗ್ಗೆ ನಾನು ತಿಳಿಸಿ ಪಂಚಾಯಿತಿ ಆಗಿರುತ್ತದೆ. ಆ ಸಮಯದಲ್ಲಿ ನನ್ನ ಹೆಸರಿನ ಎಸ್.ಬಿ.ಐ ಖಾತೆಯ ಒಂದು ಚೆಕ್ ಹಾಗೂ ನನ್ನ ಹೆಂಡತಿ ಹೆಸರಿನ ಖಾತೆಯ ಎಸ್.ಬಿ.ಐ ಬ್ಯಾಂಕ್ ಚಲ್ಲಹಳ್ಳಿ ಒಂದು ಚೆಕ್ ನ್ನು ಪಿರ್ಯಾದಿಗೆ ನೀಡಿರುತ್ತೇನೆ. ನಾನು ಬೆಂಗಳೂರಿಗೆ ಕೆಲಸಕ್ಕೆ ಹೋಗಿದ್ದು, 2-3 ವರ್ಷ ಆದ ನಂತರ ನನ್ನ ಹೆಂಡತಿಯ ಮೇಲೆ ಸದರಿ ಚೆಕ್ ನ್ನು ಬಳಸಿ ದೂರನ್ನು ದಾಖಲಿಸಿರುತ್ತಾರೆ. ಸದರಿ

ಹಣವನ್ನು ದಿಃ20.06.2016 ರಲ್ಲಿ 6,000/-, ದಿಃ25.08.2016 ರಲ್ಲಿ 5,000/-, ದಿಃ15.10.2016 ರಲ್ಲಿ 6,000/-, ದಿಃ10.12.2016 ರಲ್ಲಿ 6,000/-, ದಿಃ10.03.2017 ರಲ್ಲಿ 5,000/- ಹಣವನ್ನು ಪಿರ್ಯಾದಿಯವರಿಗೆ ನೀಡಿರುತ್ತೇನೆ. ನಾನು ನೀಡಿದಂತಹ ಎರಡು ಚೆಕ್ ಗಳನ್ನು ಪಿರ್ಯಾದಿ ನನಗೆ ವಾಪಸ್ ಹಿಂದಿರುಗಿಸುತ್ತೇನೆ ಎಂದು ಹೇಳಿ ಈ ದೂರನ್ನು ನೀಡಿರುತ್ತಾನೆ. ಮೇಲೆ ತಿಳಿಸಿದಂತಹ ಹಣವನ್ನು ನೀಡಿ ಒಂದು ಖಾಲಿ ಹಾಳೆಯಲ್ಲಿ ಪಿರ್ಯಾದಿಯವರ ಹೆಂಡತಿಯ ಸಹಿಯನ್ನು ಪಡೆದಿರುತ್ತೇನೆ.

1. ದಿಃ26.03.2012 ರಂದು ಪಿರ್ಯಾದಿರವರ ಹೆಂಡತಿ ಸ್ವಯಂ ಕೃಷಿ ಸಂಸ್ಥೆ ನೀಡಿದಂತಹ ಚೆಕ್ ನ್ನು ಸಾಕ್ಷಿ ಹಾಜರುಪಡಿಸಿ ಗುರುತಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು.

2. ದಿನನಿತ್ಯ ಪಿರ್ಯಾದಿ ಹಾಗೂ ಅವರ ಹೆಂಡತಿ ಕಟ್ಟುತಿದ್ದಂತಹ ಪಿಗ್ಮಿ ಹಣದ ಸ್ಟೇಟ್ ಮೆಂಟ್ ನ್ನು ನಿಡಿ-3 ಎಂದು ಗುರುತಿಸಲಾಯಿತು.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.